## ಎಲ್ಲ ದಾರಿಗಳೂ ಸೀತಾಪುರದ ಕಡೆಗೆ...

ಆ ಆದಿತ್ಯವಾರ ಸೀತಾಪುರಕ್ಕೆ ಸಂದೇಶ್ ಮತ್ತು ನವ್ಯಳ ಪ್ರವೇಶವಾಯಿತು. ಶೆಟ್ಟರು, ಆನಂದಣ್ಣ ಮತ್ತು ಪ್ರಭಾಕರ ಸವಣೂರಿಗೆ ಹೋಗಿ ಬಸ್ಸನ್ನು ಕಾದು ಕುಳಿತರು. ಬಸ್ಸಿನಿಂದ ಉದ್ದದ ತೆಳ್ಳಗೆ ಗಡ್ಡ ಬಿಟ್ಟ ಹುಡುಗನೊಬ್ಬ ಅವಸರದಲ್ಲಿ ಇಳಿದ. ಅವನ ಜೊತೆ ದೊಡ್ಡ ಕಪ್ಪು ಕನ್ನಡಕ ಹಾಕಿದ ಜೀನ್ಸ್ ಪ್ಯಾಂಟ್ ಧರಿಸಿದ ಹುಡುಗಿಯೂ ಇಳಿದಳು. ಶೆಟ್ಟರ ಮನಸ್ಸಿನಲ್ಲಿ ಇವರೇ ಸಂದೇಶ್ ಮತ್ತು ನವ್ಯ ಇರಬೇಕು ಅನಿಸಿತು.

'ನಮಸ್ಕಾರ' ಎನ್ನುತ್ತಾ ಶೆಟ್ಟರು ಅವರ ಕಡೆಗೆ ಹೋದರು. 'ನೀವೇ ಶೆಟ್ಟರು ಇರಬೇಕಲ್ವಾ?' ಹುಡುಗಿ ಕೇಳಿದಳು. 'ಹೌದು' ಅಂದರು ಶೆಟ್ಟರು ತಲೆಯಾಡಿಸುತ್ತಾ.

ಹುಡುಗಿ ಕಿಲಕಿಲನೆ ನಗುತ್ತಾ ಶೆಟ್ಟರ ಕೈಕುಲುಕಿ, 'ಇವರು ಆನಂದಣ್ಣ ಇರಬೇಕು, ಇವರು ಪ್ರಭಾಕರ ಅಲ್ವ?' ಅಂದಳು.

'ಅಬ್ಬಬ್ಬಾ ಈ ಹುಡುಗಿಯೇ!' ಅಂದುಕೊಂಡರು ಶೆಟ್ಟರು. ಎಲ್ಲರೂ ಪರಿಚಯ ಮಾಡಿಕೊಂಡ ಮೇಲೆ ಸೀತಾಪುರದ ಕಡೆಗೆ ಹೊರಟರು.

ಸ್ವಲ್ಪ ದೂರ ಹೋಗುವ ವೇಳೆಗೆ ನವ್ಯಳ ಬ್ಯಾಗ್ ಅನ್ನು ಪ್ರಭಾಕರ ಹೆಗಲಿಗೇರಿಸಿಕೊಂಡ. ಸಂದೇಶನಾದರೋ ಶೆಟ್ಟರು ಕೇಳಿದ ವಿಷಯಕ್ಕೆ ಮಾತ್ರ ಉತ್ತರ ಕೊಡುತ್ತಿದ್ದರೆ ನವ್ಯ ಉತ್ತರಕ್ಕಿಂತ ಜಾಸ್ತಿ ಪ್ರಶ್ನೆ ಕೇಳುತ್ತಿದ್ದಳು. ಇಬ್ಬರೂ ಏದುಸಿರು ಬಿಡುತ್ತಾ ಸೀತಾಪುರದ ಗುಡ್ಡ ಹತ್ತಿದ್ದಾಯಿತು. ಗುಡ್ಡದ ತುದಿಯಲ್ಲಿದ್ದ ಟವರ್ ಸಮೀಪ ಬಂದವರು ಒಂದು ಕ್ಷಣ ನಿಂತು ಮೇಲೆ ನೋಡಿದರು.

ಸಂದೇಶ್ ಟವರನ್ನು ನೋಡಿ 'ಅಬ್ಬಾ, ಈ ಕಂಬಗಳನ್ನು ಸವಣೂರಿನಿಂದ ಇಲ್ಲಿಗೆ ಹೇಗೆ ತಂದರಪ್ಪಾ! ಇಲ್ಲಿ ನಡೆದುಕೊಂಡು ಬರುವುದೇ

